**ಕರ್ನಾಟಕ ಸರಕಾರ**
**(ಸಾರ್ವಜನಿಕ ಶಿಕ್ಷಣ ಇಲಾಖೆ)**

**ಸಂಖ್ಯೆ: ಸಿ1(1)/ಆಡಳಿತ/ಸಾವರ್ಗಾವಣೆ/09/2018-19**

ಆಯುಕ್ತರ ಕಛೇರಿ
ಸಾರ್ವಜನಿಕ ಶಿಕ್ಷಣ ಇಲಾಖೆ,
ಐವಾನ-ಎ-ಶಾಹಿ ರಸ್ತೆ,
ಕಲಬುರಗಿ, ದಿನಾಂಕ: 28/06/2018

## ಸುತ್ತೋಲೆ

ವಿಷಯ: 2018-19ನೇ ಸಾಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕೇತರ ವರ್ಗದ ಅಧಿಕಾರಿ/ ನೌಕರರ ವರ್ಗಾವಣೆಗಳ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 22 ಸೇನೌವ 2013 ಬೆಂಗಳೂರು, ದಿನಾಂಕ: 07/06/2013.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 22 ಸೇನೌವ 2013 ಬೆಂಗಳೂರು, ದಿನಾಂಕ: 14/06/2013.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 18 ಸೇನೌವ 2014 ಬೆಂಗಳೂರು, ದಿನಾಂಕ: 06/02/2014.
4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 17 ಸೇನೌವ 2015 ಬೆಂಗಳೂರು, ದಿನಾಂಕ: 27/04/2015.
5. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 63 ಸೇನೌವ 2015 ಬೆಂಗಳೂರು, ದಿನಾಂಕ: 01/10/2015.
6. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 25 ಸೇನೌವ 2015 ಬೆಂಗಳೂರು, ದಿನಾಂಕ: 14/10/2015.
7. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇನೌವ 2017 ಬೆಂಗಳೂರು, ದಿನಾಂಕ: 27/03/2017.
8. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 18 ಸೇನೌವ 2018 ಬೆಂಗಳೂರು, ದಿನಾಂಕ: 23/06/2018.

*******

1. ಉಲ್ಲೇಖ (1) ರಿಂದ (7)ರ ಸರ್ಕಾರದ ಆದೇಶಗಳಲ್ಲಿ ಸರ್ಕಾರಿ ನೌಕರರ ವರ್ಗಾವಣೆಯ ಬಗ್ಗೆ ಮಾರ್ಗಸೂಚಿಗಳನ್ನು ನೀಡಲಾಗಿದೆ. ಸದರಿ ಆದೇಶಗಳಲ್ಲಿ ನಮೂದಿಸಿರುವ ಷರತ್ತುಗಳೊಂದಿಗೆ ಪ್ರಸ್ತುತ 2018-19ನೇ ಸಾಲಿನಲ್ಲಿ ಸರ್ಕಾರಿ ನೌಕರರ ವರ್ಗಾವಣೆಗಳನ್ನು ಸಂಬಂಧಿಸಿದ ವೃಂದದ ಕಾರ್ಯನಿರತ ವೃಂದ ಬಲದ **(Working Strength)** **ಶೇಕಡ ನಾಲ್ಕರಷ್ಟಕ್ಕೆ (4%)** ಸಿಮಿತಗೊಳಿಸಿ ದಿನಾಂಕ: 31/07/2018 ರೊಳಗಾಗಿ ಪೂರ್ಣಗೊಳಿಸಲು ಉಲ್ಲೇಖ (8) ರನ್ವಯ ಆದೇಶಿಸಲಾಗಿದೆ. (ಉಲ್ಲೇಖ (1) ರಿಂದ (8)ರ ವರೆಗಿನ ಆದೇಶಗಳನ್ನು ಇಲಾಖೆಯ **www.cpigulbarga.kar.nic.in** ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.